ಯುಗದಲ್ಲಿದ್ದೇವೆ. ಮಕ್ಕಳಿಗೆ ಬೇಗನೆ ಅರ್ಥ ಆಗುತ್ತದೆ. ನಾನು ಕಳೆದ 15 ವರ್ಷಗಳಿಂದ ಆನ್‌ಲೈನ್‌ನಲ್ಲಿ ಪಿಟೀಲು ಕಲಿಸುತ್ತಿದ್ದೇನೆ. ತಂತಿ ಮೀಟುವ ವಿಧಾನ, ಗಮಕ ತರುವುದು, ಫಿಂಗರಿಂಗ್ ಟೆಕ್ನಿಕ್ ಎಲ್ಲವನ್ನೂ ಶಿಷ್ಯಂದಿರು ಬಹಳ ಚೆನ್ನಾಗಿ ಕಲಿತಿದ್ದಾರೆ. ವಿಡಿಯೊ ಮಾಡಿ ಕಳಿಸಿದ ಕೆಲವೇ ಗಂಟೆಗಳಲ್ಲಿ ಹಾಗೆಯೇ ಆ ರಾಗವನ್ನು ಪ್ರಸ್ತುತಪಡಿಸುವ ಪರಿ ನನಗೇ ಅಚ್ಚರಿ ತರುತ್ತದೆ. ಸುಮಾರು 50–60 ಶಿಷ್ಯಂದಿರು ಕಲಿಯುತ್ತಿದ್ದು, ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ತಲುಪಲು ಸಾಧ್ಯವಾಗುತ್ತಿರುವುದು ತಂತ್ರಜ್ಞಾನದ ಕೊಡುಗೆಯೇ ಆಗಿದೆ.

◆ **ಸಮನ್ವಯತೆ, ಸೌಹಾರ್ದ ಬೆಳೆಸುವ ಸಾಧನ ಸಂಗೀತ ಎಂಬುದು ಜನಜನಿತ ಮಾತು. ಇದನ್ನು ನೀವು ಹೇಗೆ ವಿಶ್ಲೇಷಿಸುತ್ತೀರಿ?**

ಇದು ಸಂಗೀತದ ಗುಣ. ಇಲ್ಲಿರುವುದು ಹೃದಯಗಳನ್ನು ಬೆಸೆಯುವ ಭಾಷೆ. ವಿಶ್ವದೊಂದಿಗೆ ಬಾಂಧವ್ಯ ಬೆಸೆಯುವ ಗುಣ ಇರುವುದು ಸಂಗೀತಕ್ಕೆ ಮಾತ್ರ. ಯೂರೋಪ್, ಪ್ಯಾರಿಸ್, ಸಿಂಗಾಪುರ ಯಾವುದೇ ದೇಶಗಳಲ್ಲಿ ಪಿಟೀಲು ನುಡಿಸಿದರೂ ಕೇಳುಗರು ಖುಷಿಪಡ್ತಾರೆ. ಕಛೇರಿಗಳಲ್ಲಿ ಭೈರವಿ, ತೋಡಿ, ಶುದ್ಧ ಧನ್ಯಾಸಿ.. ಹೀಗೆ ಯಾವುದೇ ರಾಗ ನುಡಿಸಲಿ. ಬಹಳ ಚೆನ್ನಾಗಿ ಸ್ಪಂದಿಸುತ್ತಾರೆ. ಬಹಳ ಎಂಜಾಯ್ ಮಾಡ್ತಾರೆ.

◆ **ಐವತ್ತು ವರ್ಷಗಳ ಸಂಗೀತ ಪಯಣದಲ್ಲಿ ನಿಮ್ಮ ಮನಸ್ಸನ್ನು ಸಂತುಷ್ಟಗೊಳಿಸಿದ ಸಂಗತಿಗಳಾವುವು?**

ಒಂದಲ್ಲ, ಹತ್ತಲ್ಲ, ನೂರಾರು. 1979ರಲ್ಲಿ ಬೆಂಗಳೂರಿನ ಗಾನಕಲಾ ಪರಿಷತ್ತಿನಲ್ಲಿ ನಡೆದ ಸಮ್ಮೇಳನದಲ್ಲಿ ನಡೆದ ಸನ್ಮಾನ. ಅಲ್ಲಿ ಸಂಗೀತ ದಿಗ್ಗಜರು 'ಚಿಕ್ಕ ವಯಸ್ಸಿನಲ್ಲೇ ದೊಡ್ಡ ಸಾಧನೆ ಮಾಡಿದ್ದಿ' ಎಂದು ಮೆಚ್ಚುಗೆ ಸಲ್ಲಿಸಿದ್ದು ಸ್ಮರಣೀಯ. 1983ರಲ್ಲಿ ತಮಿಳುನಾಡಿನಲ್ಲಿ ಕಛೇರಿ ನೀಡಿದಾಗ ನನಗೆ 17 ವರ್ಷ. ನನ್ನ ಕಛೇರಿ ಕೇಳಿದ ಆಗಿನ ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್ ನನ್ನನ್ನು 'ರಾಜ್ಯ ಕಲಾವಿದ' ಎಂಬ ಬಿರುದು ನೀಡಿ ಪುರಸ್ಕರಿಸಿದ್ದರು. ಚೆನ್ನೈಯಲ್ಲಿ ನನ್ನ ಒಂದು ಆಲ್ಬಂ ಬಿಡುಗಡೆ ಸಮಾರಂಭದಲ್ಲಿ ದಿಗ್ಗಜ ಎಂ.ಎಸ್. ಗೋಪಾಲಕೃಷ್ಣನ್ ಸನ್ಮಾನಿಸಿದ್ದು, ಇಳಯರಾಜ ಅವರ ಮೆಚ್ಚುಗೆಯ ನುಡಿಗಳು, 2017ರಲ್ಲಿ ಪಿಟೀಲು ಚೌಡಯ್ಯ ಪ್ರಶಸ್ತಿ ಸ್ವೀಕರಿಸಿದ್ದು – ಇವೆಲ್ಲವನ್ನೂ ಎಂದೂ ಮರೆಯಲಾಗದು.

## ಸರಸ್ವತಿ ವೀಣೆಯಲ್ಲಿ ತನನ!

ಬೆಂಗಳೂರಿಗರಾದ ವಿದುಷಿ ಜಯಂತಿ ಕುಮರೇಶ್, ವೀಣೆಯಲ್ಲಿ ನೂರಾರು ಪ್ರಯೋಗ ಮಾಡಿ ಮಕ್ಕಳಿಂದ ಹಿಡಿದು ವೃದ್ಧರವರೆಗೂ ವೀಣೆ ನಾದವನ್ನು ಆಸ್ವಾದಿಸುವ ಆಸಕ್ತಿ ಮೂಡಿಸಿದವರು. ತಮ್ಮ ಸುದೀರ್ಘ ನಾದಪಯಣವನ್ನು ಜಯಂತಿ ಹಂಚಿಕೊಂಡಿದ್ದು ಹೀಗೆ...

◆ **ವೀಣೆಯಲ್ಲಿ ವಿಶಿಷ್ಟ ಪ್ರಯೋಗ ಮಾಡಿರುವ ನಿಮ್ಮ ನುಡಿಸಾಣಿಕೆಯ ಪಾರಂಪರಿಕ ಹಿನ್ನೆಲೆ ಏನು?**

ಮನೆತನವೇ ಸಂಗೀತದ್ದು. ತಾಯಿ, ಮಾವ, ತಾತ ಎಲ್ಲರೂ ಪಿಟೀಲು ವಾದಕರು. ನನ್ನ ತಾಯಿ ವೀಣೆಯನ್ನೂ ನುಡಿಸುತ್ತಿದ್ದರು. ನನಗೆ ಯಾವ ವಾದ್ಯ ನುಡಿಸಬೇಕು ಅಂತಾನೂ ಗೊತ್ತಿರಲಿಲ್ಲ. ತಾಯಿ ವೀಣೆ ಕಲಿಸಲು ಶುರು ಮಾಡಿದಾಗ ನನಗೆ ಮೂರು ವರ್ಷ. ನನ್ನ ದೊಡ್ಡಮ್ಮ ಚೆನ್ನೈಯಲ್ಲಿ ಪದ್ಮಾವತಿ ಅನಂತಗೋಪಾಲನ್ ಅಂತ. ಅವರ ಬಳಿ ಸತತ 22 ವರ್ಷ ವೀಣೆ ಕಲಿತೆ. ಪ್ರತಿನಿತ್ಯ ಎಂಟು ಗಂಟೆ ನಿರಂತರ ಅಭ್ಯಾಸ ಮಾಡ್ತಿದ್ದೆ. 15ನೇ ವರ್ಷದಲ್ಲಿ ಮೊದಲ ಕಛೇರಿ ನೀಡಿದೆ. ವೀಣೆ ನುಡಿಸಾಣಿಕೆಗೆ ಈಗ 38 ವರ್ಷ ಆಯ್ತು. ಕುಮರೇಶ್ ಅವರನ್ನು ಮದುವೆಯಾದ ಬಳಿಕ ಎರಡು ವಾದ್ಯಗಳು ಮನೆಯಲ್ಲಿ ಸಂವಾದ ನಡೆಸಲಾರಂಭಿಸಿದವು. ನಾವು ಇದನ್ನು ಜುಗಲಬಂದಿ ಅಥವಾ ಯುಗಳ ವಾದನ ಅನ್ನೋದನ್ನು ಬಿಟ್ಟು 'ಸಂವಾದ' ಎನ್ನುತ್ತೇವೆ. ಇದು ಒಂದು ರೀತಿಯಲ್ಲಿ 'ಸ್ಟ್ರಿಂಗ್ಸ್ ಅಟ್ಯಾಚ್ಡ್'.

◆ **ವೀಣೆಯ ರಸಾಸ್ವಾದದ ಮೂಲಕ ಹೊಸ ಫ್ಲೇವರ್ ಸೃಷ್ಟಿಸಿದ್ದೀರಿ. ಜೊತೆಗೆ ಆರೋಗ್ಯದ ಪರಿಕಲ್ಪನೆಯೂ ವೀಣೆಯಲ್ಲಿ ಹೊರಹೊಮ್ಮಿದೆ. ಇದು ಹೇಗೆ?**

ಮನೆಯಲ್ಲಿಯೇ ಕುಳಿತು ಆರೋಗ್ಯದ ಬಗ್ಗೆ ಚಿಂತಿಸುತ್ತಾ ಇರುವವರಿಗೆ ಮನಸ್ಸು ಅರಳಿಸುವ, ದೈಹಿಕ ಚಟುವಟಿಕೆಗೆ ಆಸ್ಪದ ನೀಡುವ ಹೊಸ ಪರಿಕಲ್ಪನೆಯನ್ನು ವೀಣೆಯಲ್ಲಿ ತಂದಿದ್ದೇನೆ. ಅದುವೇ 'ರನ್ ವಿತ್ ಸ'. **(Run with SA)** ಎಂದರೆ 'ಷಡ್ಜ'ದೊಂದಿಗೆ ಒಡನಾಡಿ ಎಂದರ್ಥ. ಇದೊಂದು ಅಪರೂಪದ ಆಲ್ಬಂ. ಆರೋಗ್ಯಕ್ಕಾಗಿ ಜಿಮ್, ಏರೊಬಿಕ್ಸ್ ಮಾಡುವಾಗ, ವಾಕಿಂಗ್ ಸಮಯದಲ್ಲಿ, ಓಡುವವರು ಓಡುವಾಗ ಯಾವ ಸ್ಪೀಡ್‌ನಲ್ಲಿ ಎಷ್ಟು ನಿಮಿಷ ವಾರ್ಮ್ ಅಪ್ ಮಾಬೇಕು, ಕೂಲ್‌ಡೌನ್ ಮಾಡಬೇಕು ಎಂಬುದನ್ನೆಲ್ಲ ರಿಸರ್ಚ್ ಮಾಡಿ ಇಂಥವರಿಗಾಗಿಯೇ ತಂದ ಆಲ್ಬಂ ಇದು. ವ್ಯಾಯಾಮವನ್ನು 'ಷಡ್ಜ' ಜತೆಯೇ ಮಾಡಿ ಎಂಬುದು ಇದರ ಥೀಮ್. ನಾನು ವೀಣೆ, ಕುಮರೇಶ್ ವಯೊಲಿನ್ ನುಡಿಸಿದ ಈ ಆಲ್ಬಂ ಒಂದು ತರ 'ವರ್ಲ್ಡ್ ಮ್ಯೂಸಿಕ್'ನಂತಿದ್ದು ಬಹಳ ಉಪಯುಕ್ತವಾಗಿದೆ.

◆ **ಮುಂದಿನ ತಲೆಮಾರಿಗಾಗಿಯೇ ನೀವು ತಂದಿರುವ 'ಕಪ್ ಆಫ್ ಕರ್ನಾಟಿಕ್' ಎಂಬ 'ವೆಬ್ ಎಪಿಸೋಡ್ಸ್' ಬಗ್ಗೆ ಹೇಳಿ.**

ಇಲ್ಲಿ ಬೇರೆ ಬೇರೆ ರಾಗಗಳನ್ನು ನುಡಿಸಿದ್ದೀನಿ. ಒಂದು ಕಪ್ ಕಾಫಿ ಕುಡಿಯೋದರೊಳಗೆ ಆ ರಾಗದ ಫ್ಲೇವರ್ ಅನ್ನು ಸವಿದು ಮುಗಿಸಬೇಕು ಅನ್ನೋ ಹಾಗೆ ಇದು. ಇದರಲ್ಲಿ ಪಂಚತಂತ್ರ ಕಥೆಗಳನ್ನು ಹೇಳೋ ಹಾಗೆ ಅಭೋಗಿ, ನಾಟ ಮುಂತಾದ ರಾಗಗಳನ್ನು ತಗೊಂಡು ಅವುಗಳ ಸಂಕ್ಷಿಪ್ತ ವಿವರ ನೀಡಿ ನುಡಿಸಲಾಗಿದೆ. ಕಿಡ್ಸ್ ಸಿರೀಸ್‌ನಲ್ಲಿ ವೀಣೆ ಜೊತೆ ಮಾತಾಡ್ತಾ, ಕಥೆ ಹೇಳ್ತಾ ನುಡಿಸೋದು. ಇದರಿಂದ ಮಕ್ಕಳಲ್ಲಿ 'ಕರ್ನಾಟಕ ಸಂಗೀತ ಕೂಲ್' ಎಂಬ ಭಾವನೆ ಬಂದು ಕಲಿಯುವ ಆಸಕ್ತಿ ತೋರಿಸಲಾರಂಭಿಸಿದ್ರು. ಇದೇ ರೀತಿ ನವಿಲು ನರ್ತನ ಮಾಡೋ ಹಾಗೆ, ಕೋಳಿ ಕೂಗೋ ಹಾಗೆ, ಮಿಡತೆ, ಇರುವೆಗಳ ನಡಿಗೆ ದನಿಯನ್ನು ವೀಣೆಯಲ್ಲಿ ನಾದ ತಂದು ನುಡಿಸಿದ್ದು ಮಕ್ಕಳನ್ನು ಸೆಳೆದಿದೆ.

ಪ್ರತಿಕ್ರಿಯಿಸಿ: feedback@sudha.co.in

